# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 998 (1203) |
| ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 21-08-2025 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿಯವರು |

****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ಕುಡಿಯುವ ನೀರಿಗಾಗಿ ಒಂದರಿಂದ 5ನೇ ಹಂತದವರೆಗೂ ದಿನನಿತ್ಯ ಸರಬರಾಜು ಆಗುವ ನೀರಿನ ಪ್ರಮಾಣ ಎಷ್ಟು; (ಎಂಎಲ್‌ಡಿ/ಲೆಕ್ಕದಲ್ಲಿ ವಿವರ ನೀಡುವುದು) | ಕಾವೇರಿ ಯೋಜನೆಯ ಎಲ್ಲಾ ಮೂಲಗಳಿಂದ ಬೆಂಗಳೂರು ನಗರಕ್ಕೆ ಪ್ರತಿದಿನ 2225 ದಶ ಲಕ್ಷ ಲೀಟರ್ ನಷ್ಟು ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿರುತ್ತದೆ. ವಿವರಗಳು ಈ ಕೆಳಕಂಡಂತಿದೆ. |

| ಕ್ರ. ಸಂ. | ಕಾವೇರಿ ನೀರು ಸರಬರಾಜು ಯೋಜನೆಯ ಹಂತಗಳು | ದಿನ ನಿತ್ಯ ನೀರು ಸರಬರಾಜು (ಎಂ.ಎಲ್.ಡಿ.ಯಲ್ಲಿ) |
|---|---|---|
| 1 | ಕಾವೇರಿ 1ನೇ ಹಂತ | 135 |
| 2 | ಕಾವೇರಿ 2ನೇ ಹಂತ | 135 |
| 3 | ಕಾವೇರಿ 3ನೇ ಹಂತ | 330 |
| 4 | ಕಾವೇರಿ-4ನೇ ಹಂತ 1ನೇ ಘಟ್ಟ | 300 |
| 5 | ಕಾವೇರಿ 4ನೇ ಹಂತ 2ನೇ ಘಟ್ಟ | 550 |
| 6 | ಕಾವೇರಿ 5ನೇ ಹಂತ | 775 |
| | **ಒಟ್ಟು** | **2,225** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಕಾವೇರಿ ಐ ತೀರ್ಪಿನ ನಂತರ ಬೆಂಗಳೂರಿಗೆ ಕುಡಿಯುವ ನೀರಿಗಾಗಿ ನಿಗಧಿ ಆಗಿರುವ ನೀರಿನ ಪ್ರಮಾಣ ಎಷ್ಟು; (ಟಿಎಂಸಿ ಲೆಕ್ಕದಲ್ಲಿ ವಿವರ ನೀಡುವುದು) | • ಸರ್ಕಾರದ ಆದೇಶ ಸಂಖ್ಯೆ: ಜಸಂಇ 136 ಎಂಎಂಕೆ 2023, ದಿನಾಂಕ: 07-11-2023ರಲ್ಲಿ ಒಟ್ಟು 24.00 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿರುತ್ತದೆ.<br>• ಸರ್ಕಾರದ ಆದೇಶ ಸಂಖ್ಯೆ: ಜಸಂಇ 136 ಎಂಎಂಕೆ 2023, ದಿನಾಂಕ: 17-01-2024ರಲ್ಲಿ ಹೆಚ್ಚುವರಿಯಾಗಿ 2.20 TMC Consumptive Use (11.00 TMC Drawl) ನೀರನ್ನು ಹಂಚಿಕೆ ಮಾಡಲಾಗಿದ್ದು, ಇದರಂತೆ ಒಟ್ಟು 26.20 ಟಿ.ಎಂ.ಸಿ. ನೀರನ್ನು ಬೆಂಗಳೂರಿಗೆ ಕುಡಿಯುವ ನೀರಿಗಾಗಿ ನಿಗದಿ ಮಾಡಲಾಗಿರುತ್ತದೆ. |

| | | |
|---|---|---|
| ಇ) | ಬೆಂಗಳೂರಿಗೆ ಕುಡಿಯುವ ನೀರಿಗಾಗಿ 6ನೇ ಹಂತದ ಯೋಜನೆಗಾಗಿ ಸಾಧ್ಯತೆ ವರದಿ (Feasibility report) ಹಾಗೂ (Detail project report) ಡಿ.ಪಿ.ಆರ್. ರೂಪಿಸಲಾಗಿದೆಯೇ; ಇದಕ್ಕೆ ಸರ್ಕಾರದ ಅನುಮತಿ ದೊರಕಿರುವುದೇ; (ವಿವರ ನೀಡುವುದು) | • ಬೆಂಗಳೂರಿಗೆ ಕುಡಿಯುವ ನೀರಿಗಾಗಿ 6ನೇ ಹಂತದ ಯೋಜನೆಯ ಸಾಧ್ಯತೆ ವರದಿ (Feasible report) ಹಾಗೂ ವಿಸ್ತೃತಾ ಯೋಜನಾ ವರದಿ (Detail project report) ರೂಪಿಸಲಾಗಿದೆ. ಈ ಯೋಜನೆಯ ವಿಸ್ತೃತ ಯೋಜನಾ ವರದಿ ಸರ್ಕಾರದ ಪರಿಶೀಲನೆಯ ಹಂತದಲ್ಲಿದೆ. |
| ಈ) | 6ನೇ ಹಂತದ ಯೋಜನೆಯನ್ನು ಮಳವಳ್ಳಿಯ ತೊರೆಕಾಡನಹಳ್ಳಿ ಮುಖಾಂತರ ತರಲು ಸಾಧ್ಯವೇ ಅಥವಾ ಮತ್ತೊಂದು ಪರ್ಯಾಯ ಮಾರ್ಗದಲ್ಲಿ ತರಲು ಯೋಜಿಸಲಾಗಿದೆಯೇ; ಇದಕ್ಕೆ ಸರ್ಕಾರದ ಅನುಮತಿ ದೊರಕಿರುವುದೇ; (ವಿವರ ನೀಡುವುದು) | 6ನೇ ಹಂತದ ಯೋಜನೆಯನ್ನು ಮಳವಳ್ಳಿಯ ತೊರೆಕಾಡನಹಳ್ಳಿ ಮುಖಾಂತರ ತರುವ ಮಾರ್ಗವು ಹೆಚ್ಚುವರಿ ಆರ್ಥಿಕ ಹೊರೆ ಉಂಟಾಗುವುದರಿಂದ ಪರ್ಯಾಯ ಮಾರ್ಗವಾಗಿ ಕೆ.ಆರ್.ಎಸ್ ನಿಂದ ನೇರವಾಗಿ ಕಾಟೇರಿ ಗ್ರಾಮದಲ್ಲಿ ಜಲಶುದ್ಧೀಕರಣ ಕೇಂದ್ರ ಹಾಗೂ ರಾಮನಗರ ಮತ್ತು ಕೆಂಗೇರಿಯಲ್ಲಿ ಜಲಗಾರ ಮತ್ತು ಪಂಪಿಂಗ್ ಸ್ಟೇಷನ್ ನಿರ್ಮಾಣದ ಮೂಲಕ ಬೆಂಗಳೂರು – ಮೈಸೂರು ಎಕ್ಸ್‌ಪ್ರೆಸ್ ಹೈವೇಯ ಸರ್ವೀಸ್ ರಸ್ತೆ ಮುಖಾಂತರ ಕೆಂಗೇರಿಯ ನೈಸ್ ರಸ್ತೆ ಜಂಕ್ಷನ್‌ವರೆಗೆ ಕೊಳವೆ ಮಾರ್ಗಗಳನ್ನು ಅಳವಡಿಸಿ, ಬೇಡಿಕೆಗೆ ಅನುಗುಣವಾಗಿ ಜಲಸಂಗ್ರಹಗಾರಗಳನ್ನು ನಿರ್ಮಿಸಲು ಯೋಜಿಸಲಾಗಿರುತ್ತದೆ.<br><br>ಸದರಿ ಯೋಜನೆಯ ವಿಸ್ತೃತ ಯೋಜನಾ ವರದಿಯು ಸರ್ಕಾರದ ಪರಿಶೀಲನೆ ಹಂತದಲ್ಲಿದೆ. |
| ಉ) | 6ನೇ ಹಂತದ ಯೋಜನೆ ಅಡಿಯಲ್ಲಿ ಯಾವ ಯಾವ ಬಡಾವಣೆಗಳಿಗೆ ನೀರನ್ನು ಹಾಯಿಸಲು ಯೋಚಿಸಲಾಗಿದೆ? (ವಿವರ ನೀಡುವುದು) | ಬೆಂಗಳೂರು ಉಪನಗರಗಳಾದ ಮಾದನಾಯಕನಹಳ್ಳಿ, ಹುಣಸೇಮಾರನಹಳ್ಳಿ, ಚಿಕ್ಕಬಾಣವಾರ, ನೆಲಮಂಗಲ, ಹೊಸಕೋಟೆ, ದೇವನಹಳ್ಳಿ, ಬಾಶೆಟ್ಟಿಹಳ್ಳಿ, ವಿಜಯಪುರ ಪಟ್ಟಣಗಳ ಉಪಯೋಗಕ್ಕಾಗಿ ಬಲ್ಕ್ ವಾಟರ್ ಸಪ್ಲೈ ಮೂಲಕ ಸರಬರಾಜು ಮಾಡಲು ಯೋಜಿಸಲಾಗಿರುತ್ತದೆ. |

**ಸಂಖ್ಯೆ:** ನಅಇ 245 ಎಂಎಸ್‌ಐ 2025(ಇ)

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ